ಕಾರ್ತೀಕ ಎದ್ದುಬಿಟ್ಟ. ಕಾರ್ತೀಕನ ನಿಷ್ಠುರ ನುಡಿಗೆ ಬೆಚ್ಚಿದರು, ತಾನು ಅಪ್ಪ, ಇವನು ಮಗ ಎನ್ನುವ ಹಿರಿತನವುಳಿಸಿಕೊಂಡು ಮತ್ತೆ ಹೇಳಿದರು 'ನಮ್ಮ ನಮ್ಮಲ್ಲಿ ತರ್ಕ ಯಾಕೆ, ಒಮ್ಮೆ ಗುರುಗಳನ್ನೇ ಕೇಳಿದರೆ ಹೇಗೆ?'

ಸ್ವಲ್ಪ ಹೊತ್ತು ಯೋಚಿಸಿದ ಕಾರ್ತೀಕ ಹೇಳಿದ – 'ಹೊಸ ಗುರುಗಳು ಸಿಗುವುದು ಕಷ್ಟ. ಸದಾ ತಿರುಗಾಟದಲ್ಲಿರುತ್ತಾರೆ. ಅಲ್ಲದೆ ಇವರು ಮೊದಲ ಗುರುಗಳಿಗಿಂತ ಹೆಚ್ಚು ಕರ್ಮಠರು. ನಿನ್ನಿಷ್ಟ, ಬೇಕಾದರೆ ಹೋಗಿ ಕೇಳಬಹುದು' ಎಂದು ಏನೋ ಗುರುಗುಟ್ಟುತ್ತ ನಡೆದುಬಿಟ್ಟ.



ಕಾರ್ತೀಕನಿಗೆ ತಂಗಿಯೆಂದರೆ ಎಷ್ಟೊಂದು ಪ್ರೀತಿಯಿತ್ತು. ಅವಳೇ ಎಲ್ಲಾ ಹಾಳು ಮಾಡಿಕೊಂಡುಬಿಟ್ಟಳು, ಆದರೆ ಇವನೂ ಈಗ ಪ್ರಬುದ್ಧನಾಗಿ ಯೋಚಿಸುವುದು ಬೇಡವೆ? ಆಯಿತು, ಸ್ವಾಮಿಗಳನ್ನೂ ಕೇಳೋಣ ಎಂದು ಅವನೇ ಮೃದುವಾಗಿ ಹೇಳಬೇಕಾಗಿತ್ತು. ಬದಲಾಗಿ ನಿನ್ನಿಷ್ಟ ಅನ್ನುತ್ತಾನೆ. ಅಂದರೆ ಅವನಿಗೆ ಅವಳು ಬರುವುದು ಮನಸ್ಸಿಲ್ಲ ಎನ್ನುವುದು ಸ್ಪಷ್ಟ. ಆಸ್ತಿಯಲ್ಲಿ ಪಾಲು ಕೇಳಿಯಾಳು, ಈಗಿನ ಕಾನೂನು... ಎಂಬಿತ್ಯಾದಿ ದೂರಾಲೋಚನೆಯೋ? ಏನಿದ್ದರು ನಾನೂ ಸ್ವಲ್ಪ ತಾಳ್ಮೆ ತಂದುಕೊಳ್ಳಬೇಕು. ಎಲ್ಲಾ ದೇವರ ಇಚ್ಛೆ... ಕಾರ್ತೀಕನ ದೃಷ್ಟಿಯಲ್ಲಿ ಅವನಿಗೆ ತಾನು ಸರಿಯೇ ಎನ್ನಿಸಬಹುದು. ವಿಶಾಲವಾಗಿ ಯೋಚಿಸುವ ಪ್ರೌಢತೆ ಬರಬೇಕಿತ್ತಲ್ಲ? ಧರ್ಮಸೂಕ್ಷ್ಮಗಳು ಯಾವ ಪಠ್ಯದಲ್ಲಿಯೂ ದೊರೆಯಲಾರವು. ಅದಕ್ಕೆ ಮನಸ್ಸು ಬೇಕು, ಅರಿವು ಬೇಕು. ನಾರಣಪ್ಪನ ಕೌರವನೇ ಹೇಳಿಲ್ಲವೆ 'ಎನ್ನ ಹೃದಯದಲಿದ್ದು ಮುರಿವನು ಗನ್ನದಲಿ ಸಂಧಿಯನು' ಎಂದು. ಅದೂ ಪಲಾಯನವಾದವೇ. ಛೆ, ನಿನ್ನ ಮಗ ಧರ್ಮರಾಯನಂಥವನು ಎಂದು ಹಿರಿಯ ಗುರುಗಳೇ ಹೇಳಿದ್ದರೆಂದಾಗ ತಾನೀಗ ಇವನನ್ನ ಕೌರವನಿಗೆ ಹೋಲಿಸುವುದೆ... ಹೀಗೆ ಭಟ್ಟರ ಮನಸ್ಸಿನ ಯೋಚನಾ ಲಹರಿ ಸಾಗುತ್ತ, ಕುಮಾರವ್ಯಾಸನ ಭಾರತ ನೆನಪಾದದ್ದೆ ಅದನ್ನೆತ್ತಿಕೊಂಡರು...

ಮತ್ತೆರಡೇ ದಿನಕ್ಕೆ ಭಟ್ಟರು ಮಠಕ್ಕೆ ಸವಾರಿ ಬೆಳೆಸಿದರು. ಗುರುಗಳು ಸಿಗಲಿಲ್ಲ. ಎಲ್ಲೋ ಪಾದಪೂಜೆಗೆ ಹೋಗಿದ್ದಾರೆ ಅಂತಾಯಿತು. ಭಟ್ಟರಿಗೆ ಹೊತ್ತು ಹೋಗುತ್ತಿರಲಿಲ್ಲ, ಊಟ ಸೇರುತ್ತಿರಲಿಲ್ಲ, ನಿದ್ದೆ ಸುಳಿಯುತ್ತಿರಲಿಲ್ಲ. ಹೋಗಿ ಬಂದಾಕ್ಷಣ ರುಕ್ಮಿಣಿ ಬೇರೆ ಕೇಳುತ್ತಿದ್ದಳು 'ಗುರುಗಳು ಸಿಕ್ಕಿದರಾ? ಏನೆಂದು ಹೇಳಿದರು?' ಎಂದು. ಮತ್ತೆ ಹೋದರು. ಅವತ್ತು ಯಾರೋ ಉತ್ತರ ಭಾರತದವರು ಬಂದಿದ್ದಾರೆ, ಅವರೊಡನೆ ಮೀಟಿಂಗ್‌ನಲ್ಲಿ ಇದ್ದಾರೆ, ಮರುದಿನ ಬನ್ನಿ ಎನ್ನುವ ಉತ್ತರ ಬಂತು. ಮತ್ತೆರಡು ಬಾರಿಯೂ ಹೀಗೇ ಏನೋ ಆಯಿತೇ ಹೊರತು ಗುರುಗಳ ಭೇಟಿ ಸಾಧ್ಯವಾಗದೆ ಹೋದಾಗ ಖಿನ್ನರಾಗಿ ಕಾರ್ತಿಕನ ಆಫೀಸಿಗೆ ಹೋಗಿ ಕುಳಿತುಬಿಟ್ಟರು. ಅಲ್ಲಿಗೇ ಬಂದ ಗುರುಗಳ ಆಪ್ತನೊಬ್ಬ, ಭಟ್ಟರತ್ತ ನೋಡಿ, ಗುರುಗಳು ಇಂದು ರಾತ್ರಿಯೆ ಕೊಲ್ಕತ್ತಾಕ್ಕೆ ಹೊರಟಿದ್ದಾರೆ ಇನ್ನೊಂದು ತಿಂಗಳು ಸಿಗಲಿಕ್ಕಿಲ್ಲ ಎಂದು ಕಾರ್ತೀಕನತ್ತ ನೋಡಿ ನಕ್ಕು ಹೋದಾಗ, ಭಟ್ಟರಿಗೆ ತಾವು ತೀರಾ ನಗಣ್ಯರಾಗುತ್ತಿದ್ದೇವೆ ಎನ್ನುವುದರ ಅರಿವಾಗುವುದರೊಟ್ಟಿಗೆ ಇದರಲ್ಲಿ ಕಾರ್ತೀಕನ ಹುನ್ನಾರವು ಇದೆಯೇನೊ ಎಂದು ಮೊಟ್ಟ ಮೊದಲ ಬಾರಿಗೆ ಅನ್ನಿಸಿ ಸ್ವಾಭಿಮಾನ ಬುಸ್ ಎಂದಿತು. ಆದರು ಸಂಯಮ ತಂದುಕೊಂಡು 'ಕಾರ್ತಿ, ನನಗೂ ತಿರುಗಿ ತಿರುಗಿ ಸಾಕಾಗಿದೆ, ಇಂದು ನೀನೇ ಒಂದು ಮಾತು ಕೇಳಿಬಿಡು. ಈಗ ಅನುಷ್ಠಾನಕ್ಕೆ ಹೋದರು ಅಂತಾಯಿತಲ್ಲ, ಅವರು ಹೊರಡುವ ಮುನ್ನ ಹೇಗೂ ನಿನ್ನನ್ನ ಕರೆದು ಒಮ್ಮೆ ಮಠದ ವಿಚಾರ ಕೇಳಬಹುದಲ್ಲ' ಎಂದಷ್ಟೆ ಹೇಳಿ ದುರ್ದಾನ ತೆಗೆದುಕೊಂಡವರಂತೆ ಎದ್ದು ನಡೆದುಬಿಟ್ಟರು. ವಿಷಯ ತಿಳಿದ ರುಕ್ಮಿಣಿಯೂ ಕೂಡ ಅವತ್ತು ರಾತ್ರಿ ನಿದ್ದೆಯಿಲ್ಲದೆ ಮುಸುಮುಸು ಅಳುತ್ತ ಉಳಿದದ್ದು, ತಮಗೂ ಎದೆ ಹಿಂಡುವ ನೋವು ಕಾಣಿಸಿಕೊಂಡದ್ದು ಭಟ್ಟರನ್ನ ತಲ್ಲಣಗೊಳಿಸಿತ್ತು. ಬೇಡ